

ಮಧ್ಯಭಾಗದಲ್ಲಿರುವ ಚಪ್ಪಟೆ ಆಕಾರದ ಅಗಲದ ಎದೆ ಮೂಳೆಯನ್ನು (Sternum) ಉದ್ದಕ್ಕೆ 6ರಿಂದ 8 ಇಂಚು ಸೀಳಿ, ಈ ಮೂಳೆಯ ಹಿಂದಿರುವ ಹೃದಯದ ನ್ಯೂನತೆಗಳನ್ನು ಸರಿಪಡಿಸಲಾಗುತ್ತದೆ. ಪುಟ್ಟ ಮಕ್ಕಳಲ್ಲಿ ಚಿಕ್ಕಂದಿನಲ್ಲೇ ಕಂಡುಬರುವ ಹೃದಯದಲ್ಲಿ ರಂಧ್ರ (ASD, ASD with PAPVC) ಅಥವಾ ಕವಾಟಗಳ ಸಮಸ್ಯೆ (Mitral Stenosis) ಇತ್ಯಾದಿ ಸರ್ಜರಿಗಳಿಗೂ ಇದೇ ರೀತಿಯಲ್ಲಿ ಎದೆಯ ಮೂಳೆಯನ್ನು ಸೀಳಿ ಚಿಕಿತ್ಸೆ ಕೊಡಲಾಗುತ್ತದೆ. ಈ ತೆರೆದ ಹೃದಯದ ಶಸ್ತ್ರಚಿಕಿತ್ಸೆಯ ನಂತರ ಎದೆಯ ಮಧ್ಯದಲ್ಲಿ ಉದ್ದಕ್ಕೆ ಸೀಳಿರುವ ಶಸ್ತ್ರಚಿಕಿತ್ಸೆಯ ಗುರುತು (Surgical Scar) ಜೀವನಪರ್ಯಂತ ಇರುತ್ತದೆ. ವಯಸ್ಸಾದವರಲ್ಲಿ ಶಸ್ತ್ರಚಿಕಿತ್ಸೆಯ ಗುರುತು ಅಂತಹ ಪರಿಣಾಮವನ್ನೇನೂ ಮಾಡುವುದಿಲ್ಲ. ಆದರೆ ಚಿಕ್ಕಮಕ್ಕಳಲ್ಲಿ ಮತ್ತು ಮದುವೆಯಾಗದ ಯುವಕ, ಯುವತಿಯರ ಎದೆಯ ಮೇಲೆ ಉಂಟಾಗುವ ಶಸ್ತ್ರಚಿಕಿತ್ಸೆಯ ಗಾಯದ ಗುರುತು ಜೀವನಪರ್ಯಂತ ಅವರಲ್ಲಿ ಒಂದು ರೀತಿಯ ಕೀಳರಿಮೆ, ಮಾನಸಿಕ ಕ್ಷೋಭೆ ಉಂಟುಮಾಡಬಲ್ಲದು. ಹಾಗಾಗಿ ಈ ಶಸ್ತ್ರಚಿಕಿತ್ಸೆಯ ಬದಲಿಗೆ MICS (ಕೀ ಹೋಲ್ ಸರ್ಜರಿ) ಮುಖಾಂತರ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಮೇಲಿನ ಈ ಸಮಸ್ಯೆಯಿಂದ ಮುಕ್ತವಾಗಬಹುದು.

‘ಕೀ ಹೋಲ್ ಸರ್ಜರಿ’ಯಲ್ಲಿ **Modified RVIAT (Right Vertical Infra Axillary Thoracotomy), RALT(Right Anterolateral Thoracotomy), RAMT (Right Anterior Mini Thoracotomy)** ಎಂಬ ವಿಧದ ಶಸ್ತ್ರಚಿಕಿತ್ಸಾ ವಿಧಾನಗಳಿವೆ. ಈ ಸರ್ಜರಿಗಳಲ್ಲಿ ಎದೆಯ ದೊಡ್ಡ ಮೂಳೆಯಾದ **Sternum** ಅನ್ನು ಕತ್ತರಿಸದೆ ಎದೆಯ ಪಕ್ಕೆಲುಬುಗಳ ಜಾಗದಿಂದ ಅಥವಾ ಕಂಕುಳಿನ ಭಾಗದಿಂದ ಪುಟ್ಟ ರಂಧ್ರದ ಮೂಲಕ ಹೃದಯ ಶಸ್ತ್ರಚಿಕಿತ್ಸೆಯನ್ನು ಮಾಡುವ ವಿವಿಧ ಬಗೆಗಳು.

ಈ ಕೀ ಹೋಲ್ ಸರ್ಜರಿ ಅಥವಾ **Modified RVIAT** ಶಸ್ತ್ರಚಿಕಿತ್ಸೆಯಲ್ಲಿ ಕಂಕುಳದ ಕೆಳಗಡೆ ಎರಡು ಇಂಚಿನ ಪುಟ್ಟ ಒಂದು ಗುರುತು ಬಿಟ್ಟರೆ ಎದೆಯ ಮೇಲೆ ಬೇರೆ ಯಾವ ರೀತಿಯ ಗುರುತೂ (Scar) ಇರುವುದಿಲ್ಲ. ಈ ಗುರುತು ಕೈಯನ್ನು ಮೇಲೆತ್ತಿದರೆ ಮಾತ್ರ ಕಾಣುತ್ತದೆ. ಹಾಗಾಗಿ ಮಕ್ಕಳಿಗೆ ಈ ಶಸ್ತ್ರಚಿಕಿತ್ಸೆ ಸೌಂದರ್ಯದ ದೃಷ್ಟಿಯಿಂದ ಉತ್ತಮ ಹಾಗೂ ಇದು ಹೆಣ್ಣುಮಕ್ಕಳ ಸ್ತನದ ಬೆಳವಣಿಗೆಯಲ್ಲಿ ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ. ಹಾಗಾಗಿ ಈ ಶಸ್ತ್ರಚಿಕಿತ್ಸೆ (ಕೀ ಹೋಲ್ ಸರ್ಜರಿ) ಎಂಬುದು ಹೃದಯ ಸಂಬಂಧಿ ಕಾಯಿಲೆಗಳಿಂದಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾದ ಮಕ್ಕಳಿಗೆ ನಿಜಕ್ಕೂ ವರವೇ ಸರಿ. ಈ ಶಸ್ತ್ರಚಿಕಿತ್ಸೆಯಲ್ಲಿ ರಕ್ತಸ್ರಾವವೂ ಕಡಿಮೆ ಹಾಗೆಯೇ ಸೋಂಕಿನ ಪ್ರಮಾಣವೂ ಬಹಳ ಕಡಿಮೆ. ಆಸ್ಪತ್ರೆಯಿಂದ ಬೇಗನೆ ಡಿಸ್ಚಾರ್ಜ್ ಕೂಡ ಆಗಬಹುದು. ಹಾಗಾಗಿ ಈ ಸಮಸ್ಯೆಯಿಂದ ಬಳಲುತ್ತಿರುವ ಬಹುಪಾಲು ರೋಗಿಗಳಿಗೆ ಈ ವಿನೂತನ ವಿಧಾನದಿಂದ ಡಾ. ರಾಜೇಶ್ ಶಸ್ತ್ರಚಿಕಿತ್ಸೆ ಮಾಡುತ್ತಿದ್ದಾರೆ.

ಡಾ. ರಾಜೇಶ್ ಕಿಶನ್ ರಾವ್ ಬಳ್ಳಾರಿಯ ವಿಮ್ಸ್‌ನಿಂದ ವೈದ್ಯಕೀಯ ಪದವಿ ಪಡೆದು, ಎಂ.ಎಸ್. ಜನರಲ್ ಸರ್ಜರಿಯನ್ನು ಮಂಗಳೂರಿನ ಕೆ.ಎಂ.ಸಿ.ಯಲ್ಲಿ ಹಾಗೂ ಎಂ.ಸಿ.ಎಚ್. ಪದವಿಯನ್ನು ಜಯದೇವದಲ್ಲಿಯೇ ಪಡೆದು, ಅಲ್ಲಿಯೇ ಸುಮಾರು 2008ರಿಂದ ಸೇವೆಯನ್ನು ಸಲ್ಲಿಸುತ್ತಾ, ಹಂತಹಂತವಾಗಿ ತಮ್ಮ ಪದವಿಯಲ್ಲಿ ಬಡ್ತಿ ಪಡೆಯುತ್ತಾ, ಈಗ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೊಸದಾಗಿ ಇಲ್ಲಿ ಸೇರಿದಾಗ ಎಲ್ಲಾ ರೀತಿಯ ಹೃದಯದ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದ ಇವರು, ಹೃದಯ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿದ್ದ ಮಕ್ಕಳನ್ನು ಗಮನಿಸಿ, ಅವರಿಗೆ ಚಿಕ್ಕವಯಸ್ಸಿನಲ್ಲೇ ಎದೆಯ ಮೇಲೆ ಆಗುತ್ತಿದ್ದ ಶಸ್ತ್ರಚಿಕಿತ್ಸೆಯ ಗುರುತನ್ನು ಇಲ್ಲವಾಗಿಸಲು ಈ ಆಧುನಿಕ ಶಸ್ತ್ರಚಿಕಿತ್ಸೆಯ ಮೊರೆ ಹೋದರು. ಡಾ. ರಾಜೇಶ್ ಈಗ ಬಹಳಷ್ಟು ಸಮಯವನ್ನು ಮಕ್ಕಳ ಹೃದಯ ಶಸ್ತ್ರಚಿಕಿತ್ಸೆಗಳಿಗಾಗಿ ಮೀಸಲಿಟ್ಟಿದ್ದಾರೆ.



ಡಾ. ರಾಜೇಶ್ ಕಿಶನ್ ರಾವ್

ಕೀ ಹೋಲ್ ಸರ್ಜರಿ ಮಾಡಲು ಸರ್ಜನ್‌ಗೆ ಸಾಕಷ್ಟು ಪರಿಣತಿ, ಶ್ರಮ ಮತ್ತು ತಾಳ್ಮೆ ಬೇಕಾಗುತ್ತದೆ. ಇವೆಲ್ಲವೂ ಡಾ. ರಾಜೇಶ್ ಅವರಲ್ಲಿ ಬಹಳಷ್ಟು ಇರುವ ಕಾರಣ, ಕರ್ನಾಟಕದ ಮೂಲೆಮೂಲೆಗಳಿಂದ ಹೃದಯಸಂಬಂಧಿ ಕಾಯಿಲೆಗಳ ಚಿಕಿತ್ಸೆಗೆಂದು ಜಯದೇವ ಆಸ್ಪತ್ರೆಗೆ ಬರುವ ಬಡವರು, ಮಧ್ಯಮ ವರ್ಗದವರ ಪಾಲಿಗೆ ಆಶಾಕಿರಣವಾಗಿದ್ದಾರೆ. ಜಯದೇವಕ್ಕೆ ಬರುವ ಬಹುಪಾಲು ರೋಗಿಗಳು ದೂರದ ಬೀದರ್, ಕಲಬುರ್ಗಿ, ರಾಯಚೂರು, ಬಳ್ಳಾರಿ, ಕೊಪ್ಪಳ, ಹೊಸಪೇಟೆ ಜಿಲ್ಲೆಗಳಿಗೆ ಸೇರಿದವರಾಗಿದ್ದಾರೆ. ಕರ್ನಾಟಕದ ಎಲ್ಲಾ ಭಾಗಗಳಿಂದ ಹಾಗೂ ನೆರೆ ರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಒರಿಸ್ಸಾದಿಂದಲೂ ರೋಗಿಗಳು ಬರುತ್ತಾರೆ.

ವಿನೂತನ ಶಸ್ತ್ರಚಿಕಿತ್ಸೆಯಿಂದ ಗುಣವಾದ ರೋಗಿಗಳ ಸಂಖ್ಯೆ 500 ದಾಟಿದ್ದಕ್ಕೆ ಡಾ. ರಾಜೇಶ್ ಅವರನ್ನು ಅಭಿನಂದಿಸಿದರೆ, ಅದಕ್ಕೆ ಅಷ್ಟೇನೂ ಉಬ್ಬದೆ ತುಂಬಾ ವಿನೀತರಾಗಿಯೇ ‘ಇದೆಲ್ಲಾ ನನ್ನ ಒಬ್ಬನ ಸಾಧನೆ ಎನ್ನುವುದು ತಪ್ಪಾಗುತ್ತದೆ. ನನಗೆ ಸದಾಕಾಲ ಎಲ್ಲಾ ಕೆಲಸಗಳಿಗೆ ಸಹಕಾರ ಕೊಡುವ ನಮ್ಮ ವಿಭಾಗದ ಮುಖ್ಯಸ್ಥರು, ಸಂಸ್ಥೆಯ ನಿರ್ದೇಶಕರು ಮತ್ತು ನನಗೆ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡುವ ಹಿರಿಯ ಹಾಗೂ ಕಿರಿಯ ಸಹೋದ್ಯೋಗಿಗಳು, ಅರಿವಳಿಕೆ ತಜ್ಞರ ತಂಡ, ನುರಿತ ಶುಶ್ರೂಷಕಿಯರು, ತಂತ್ರಜ್ಞರ ತಂಡ ಮತ್ತು ಈ ಕೆಲಸಕ್ಕೆ ಎಲೆಮರೆಯ ಕಾಯಿಗಳಂತೆ ಕೆಲಸ ಮಾಡುವ ಎಲ್ಲರನ್ನೂ ನೆನೆಯುತ್ತೇನೆ’ ಎನ್ನುತ್ತಾರೆ.

ನಿಮ್ಮ ಈ ನಿರಂತರ ಶ್ರಮದ ಹಿಂದಿನ ಪ್ರೇರಣೆ ಏನೆಂದು ಪ್ರಶ್ನಿಸಿದರೆ, ‘ಮಕ್ಕಳಿಗೆ ಹೃದಯ ರೋಗವಿದೆಯೆಂದು ಕೇಳಿದ ತಕ್ಷಣ ಪೋಷಕರೂ ಕುಸಿದುಹೋಗುತ್ತಾರೆ. ಈ ಶಸ್ತ್ರಚಿಕಿತ್ಸೆಗಾಗಿ ನಮ್ಮಲ್ಲಿಗೆ ಬರುವ ಪೋಷಕರು ಬಹಳ ಆತಂಕದಲ್ಲಿರುತ್ತಾರೆ. ಕೀ ಹೋಲ್ ಸರ್ಜರಿಯ ಮೂಲಕ ಗುಣಮುಖರಾಗಿ, ಎದೆಯ ಮೇಲೆ ಯಾವುದೇ ಶಸ್ತ್ರಚಿಕಿತ್ಸೆಯ ಗುರುತೂ ಇಲ್ಲದಂತೆ ಡಿಸ್ಚಾರ್ಜ್ ಆಗಿ ಮನೆಗೆ ಹೋಗುವಾಗ, ಆ ಮಕ್ಕಳ ಮತ್ತು ಪೋಷಕರ ಮುಖದ ಮೇಲಿನ ಸಂತಸದ ನಗು ನನ್ನ ಕೆಲಸಕ್ಕೆ ಯಾವಾಗಲೂ ಪ್ರೇರಣೆ ನೀಡುತ್ತದೆ’ ಎಂದು ಡಾ. ರಾಜೇಶ್ ಮುಗುಳ್ನಗುತ್ತಾರೆ. ಹಬ್ಬಲಿ ಇಂಥ ಹೃದಯವಂತರ ರಸಬಳ್ಳಿ.

ಪ್ರತಿಕ್ರಿಯಿಸಿ: **feedback@sudha.co.in**